doc-23

T-P-2

Regd No M 12/79 | 43rd Year | Tri 'Satyavadi' Mysore | 1—4—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಸ್ಥಾಪಕರು:- ಅಂಮನೆ ಸಿಂಸ್ಕೇದಾರ್ ಎಂ. ವಿ ಸುಬ್ಬರಾಯುರು [ಬಿಡಿ ಪ್ರತಿ 3ಪೈ

ಮತ್ತೆ 10 ಬ್ಲಾಕ್‌ಗಳು

ವೈಸೂರು ಪ್ರಾಂತಕ್ಕೆ ಈ ದಿನ ದಿಂದ 10 ಎಸ್ಟರಣಾ ಬ್ಲಾಕುಗಳನ್ನು ಕೇಂದ್ರ ಸಾಮುದಾಯಿಕ ಅಭಿವೃದ್ಧಿ ಸಚಿವ ಶಾಖೆ ಮಂಜೂರ್ಮಾಡಿದೆ ಇದರ ವಾರ್ಷಿಕ ವೆಚ್ಚ ರೂ 18800

ಚೀಣಾ ಕಾರ್ಯಕ್ಕೆ ಸ್ವಾಗತ

ಹಾಂಗ್ ಕಾಂಗ್ 30 — ಟಿಬೆಟ್ ಸರ್ಕಾರವನ್ನು ರದ್ದು ಮಾಡಿ, ಪಂಚೆ ಲಾವಾ ನೇತೃತ್ವದಲ್ಲಿ ಸಿದ್ಧತೆ ಸಮಿತಿಯನ್ನು ಚೀಣಿ ಕಮ್ಯುನಿಸ್ಟರು ನೇಮಕ ಮಾಡಿರುವುದನ್ನು ಕರಿ ಜ್ಞೆ ಪೆಚ್ಚಿನ ಟಿಬೆಟಿನ ಉಪಾಧ್ಯಾಯರೂ ಮತ್ತು ವಿದ್ಯಾರ್ಥಿಗಳು ಸ್ವಾಗತಿಸಿರುವರು

ಖಂಡನೆ

ಕೌಲಾಲಂಪುರ 30 — ಮಲಯಾ ಸರ್ಕಾರ ಪ್ರಕಟಣೆಯೊಂದನ್ನು ಹೊಡಿಸಿ ಟಿಬೆಟ್ ದಂಗೆ ಅಡಗಿಸುವುದಲ್ಲಿ ಚೀಣಾದ ದಬ್ಬಾಳಿಕೆ ಖಂಡಿಸಿದೆ 56 ನೇ ಇಸವಿಯಲ್ಲಿ ಹಂಗೇರಿಯಲ್ಲಿ ನಡೆದ ದಂಗೆಗೆ ಈ ದಂಗೆಯನ್ನು ಹೋಲಿಕೆ ಮಾಡಿದೆ

ದಂಗೆಕೋರರ ವಶದಲ್ಲಿ

ಟಿಬೆಟ್ಟಿನ ಹತ್ತನೆಯೊಂದು ಭಾಗ ಭೂ ಪ್ರದೇಶ ದಂಗೆಕೋರರ ಹತೋಟಿಯಲ್ಲಿದೆ.

ಕ್ಷೌರಿಕ ಅದೀತು

ಗಾಂಧಿಂಡ್ ಮಾ 30 — ಚಿಕ್ಕ ಬಳ್ಳಾಪುರದಲ್ಲಿ ಕಂಬೈಂಡ್ ಆಸ್ಪತ್ರೆ ಆರಂಭಿಸುತ್ತಿದ್ದು ಭೂ ಸುಧಾರಣೆ ಜಾರಿಗೆ ಬರುವುದರಿಂದ ಕ್ರಾಂತಿ ಉಂಟಾಗುವ ಬಗ್ಗೆ ಮಂತ್ರಿ ಸುಬ್ರಹ್ಮಣ್ಯ ತಿಳಿಸಿದರು.

ಪ್ರತಿಕ್ರಿಯೆ ಇಲ್ಲ

ಟಿಬೆಟ್ಟಿನ ಬಗ್ಗೆ ಭಾರತ ಪ್ರತಿನಿಧಿಸುವ ದಿಲ್ಲಿಯ ಪಂ। ನೆಹರು ಟಿಬೆಟ್ಟಿನವರಿಗೆ ಕೊಟ್ಟಿರುವುದು ದೆಹಲಿ ವಾರ್ತೆ

ವಿದೇಶಿ ವಿನಿಮಯ ಉಳಿಕೆಗೆ

ಕರಾಚಿ ಮಾ 31 — ಅಧ್ಯಕ್ಷರು ಮತ್ತು ಮಂತ್ರಿಮಂಡಲದಸದಸ್ಯರ ಪತ್ನಿಯರ ನೇತೃತ್ವದಲ್ಲಿ 50 ಪ್ರಮುಖ ಮಹಿಳೆಯರು ವಿದೇಶದಿಂದ ಆಮದಾದ ಪದಾರ್ಥಗಳನ್ನು ತ್ಯಜಿಸಲು ನಿರ್ಧರಿಸಿರುವರು. ವಿದೇಶವಿನಿಮಯ ಉಳಿಸಲು ಈ ಕ್ರಮ

ಅಣುವಿನಿಂದ ಕ್ಯಾನ್ಸರ್

ಪ್ಯಾರಿಸ್ ಫ್ರಾನ್ಸಿಸ್ಕೊ ಮಾ 30 — ಪರಮಾಣು ಬೀಳುವ ಕಾರಣ ಕ್ಯಾನ್ಸರ್ ರೋಗ ಉಂಟಾಗುವದಾಗಿ ನೋಬೆಲ್ ಪಾರಿತೋಷಕ ಗಳಿಸಿರುವ ಡಾ|| ಲೈನಸ್ ಪಾಲಿಂಗ್ ಹೇಳಿದ್ದಾರೆ.

ಗವರ್ನರಿಂದ ದಾನ

ಲಕ್ನೊ ಮಾ 30 — ಉತ್ತರ ಪ್ರದೇಶದ ಜಾರ್ಖಂಡದಲ್ಲಿರುವ ತಮ್ಮ ಜಮೀನಾಂದಾರಿ, ಅಲ್ಲಿನ ಕಟ್ಟಡಗಳು ಮತ್ತು ಮಂಗಳನ್ನು ಉತ್ತರಪ್ರದೇಶ ಸರ್ಕಾರಕ್ಕೆ ಕೊಟ್ಟಿದ್ದಾರೆ ಈ ದಾನದ ಜೊತೆಗೆ 1 ಸಹಸ್ರ ರೂ ಚೆಕ್ಕನ್ನು ಕೂಡ ಕಳಿಸಿರುವರು ಈ ಹಣದಲ್ಲಿ ವಿವಿಧೋದ್ದೇಶ ಸಂಘದ ನಿರ್ಮಾಣ ಮಾಡಲಾಗುವುದಾಗಿ ಉತ್ತರ ಪ್ರದೇಶದ ಗವರ್ನರಾದ ಶ್ರೀ ವಿ ವಿ ಗಿರಿ ಡಾ|| ರಾಧಾಕೃಷ್ಣನ್ ರಿಗೆ ಕೊತ್ತ ಸತ್ಕಾರ ಸಂದರ್ಭದಲ್ಲಿ ಭಾಷಣ ಮಾಡುತ್ತಾ ತಿಳಿಸಿದರು

ಅಣು ನಿಶೇಧಕ್ಕೆ ಒತ್ತಾಯ

ಲಂಡನ್ ಮಾ 30 — ಪರಮಾಣು ಬಾಂಬು ನಿಶೇಧ ಮಾಡಿ ಎಂಬ ಬೇಡಿಕೆಯನ್ನು ಒತ್ತಾಯ ಮಾಡಲು ಬ್ರಿಟಿಷ್ ಲಾಗರ ಚೌಕದಲ್ಲಿ ಅಧಿಕ ಸಂಖ್ಯೆಯಲ್ಲಿ ಗಂಡಸರು, ಹೆಂಗಸರು ಮತ್ತು ಮಕ್ಕಳು ಸೇರಿ ಭಾರಿ ಪ್ರದರ್ಶನ ನಡೆಸಿದರು

— × —

ಭಾರತ ಸಾಗರ ಸುಗ್ಗಿದ ಕಾರಣ 2 ರಿಂದ 3 ನಾವಿಂದ ಪಟಗೆ ಜನ ಸಕ್ತಿರುವ ಭೀತಿ ಮಡಗಾಸ್ಕರ್‌ದಲ್ಲಿ ಇದೆ.

ವಿಧಾನ ಸೌಧ ಸಾಲದಿರುವ ಕಾರಣ ಮತೊಂದು ಸೌಧ

ಚಿಕ್ಕದುರ್ಗ ಮಾ 30 — ಪ್ರಾಂತ ಆಡಳಿತ ವಿಸ್ತರಣೆ ಆಗುತ್ತಿದೆ ಮತ್ತು ವಿಧಾನ ಸೌಧ ಸಾಲದಾಗುತ್ತಿದೆ ಮತೊಂದು ಕಟ್ಟಡ ನಿರ್ಮಾಣ ಮಾಡುವ ಸೂಚನೆ ಇದೆ ಎಂದು ಮುಖ್ಯ ಮಂತ್ರಿ ಶ್ರೀ ಬಿ ಡಿ ಜತ್ತಿ ತಿಳಿಸಿದರು

ವಿಮಾನಗಳ ಬಳಕೆ

ಪತ್ತೆ ಇಲ್ಲದಿರುವ ದಲಾಯಿಲಾಮ ರವರ ಶೋಧನೆಗೆ ಚೀಣಿ ಅಧಿಕಾರಿಗಳು ವಿಮಾನ ಉಪಯೋಗಿಸುತ್ತಿರುವರೆಂದು ಕಾಲಿಂಪಾಂಗಿನಿಂದ ವರದಿ ಬಂದಿದೆ

ಅಕ್ರಮ ಪ್ರವೇಶ

ಜಮ್ಮು ಮಾ 31 — ಈ ತಿಂಗಳ 25 ಮತ್ತು 26 ನೇ ತಾ|| ಕಾಶ್ಮೀರ ಕಣಿವೆಯಲ್ಲಿ ಭಾರತ ಗಡಿ ಭಂಗ ಮಾಡಿ ಪಾಕಿಸ್ತಾನ ಸೇನೆಗಳು ಗುಂಡುಹಾರಿಸಿದವು. ಇದನ್ನು ವಿಶ್ವಸಂಸ್ಥೆ ವೀಕ್ಷಕರಿಗೆ ತಿಳಿಸಿದೆ

ರಕ್ಷಣಾ ವೆಚ್ಚ

ಕರಾಚಿ 31 — 3 ತಿಂಗಳ ಪಾಕಿಸ್ತಾನದ ಹಂಗಾಮಿ ಅಂದಾಜಪಟ್ಟಿಯಲ್ಲಿ ರಕ್ಷಣಾ ವೆಚ್ಚ ರೂ 20 ಕೋಟಿ ನಿಗದಿ ಆಗಿದೆ

× ಕಾಣೆಗಲ್ ಮಾ 31 — ಸಹಕಾರ ಮಂತ್ರಿ ಶ್ರೀ ಮಾಲಿ ಮರಿಯಪ್ಪನವರು ಕಂಗಳ ಬ್ಯಾಲಿ ಅಧ್ಯಕ್ಷತೆ ವಹಿಸಿದ್ದರು 200 ಹಳ್ಳೀಕಾರ್ ಕಂಗಳ ಪೈಕಿ 50 ಕ್ಕೆ ಬಹುಮಾನ ಸಿಕ್ಕಿತು.

ನಾಳೆಯ ಪಂಚಾಂಗ

ಶ್ರೀ ಮಹಾವಿದ್ವಾನ್ ದೈವಜ್ಞ ಶಿಖಾಮಣಿ ಸೆಂದಕ್ಕೃಷ್ಣ ಜೋಯಿಸರಿಂದ
2 ನವಮಿ ದಶಮಿ ಉತ್ತರಾಷಾಢ

ನೆಹರು ನಾಯಕತ್ವಕ್ಕೆ ಚ್ಯುತಿ

ಚಿಕ್ಕದುರ್ಗ ಮಾ 30 — ಜಮೀನಾನು ಅಡವಾನ ಪತ್ರಕರ್ತರ ಸಂಘದ ಶಂಕುಸ್ಥಾಪನೆಯನ್ನು ಮಾಡಿ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆಂವೇರಿಸುತ್ತಾ, ಪತ್ರಕರ್ತರ ವೃತ್ತಿಯಲ್ಲಿ ಪದ್ಧತಿ ವಿಫಲವಾದರೆ ಪಂ|| ನೆಹರು ನಾಯಕತ್ವಕ್ಕೆ ಚ್ಯುತಿ ಉಂಟಾಗುವದಾಗಿ ಎಚ್ಚರಿಸಿದರು ಅಧ್ಯಕ್ಷತೆ ವಹಿಸಿದ್ದ ಮುಖ್ಯ ಮಂತ್ರಿ ಶ್ರೀ ಬಿ ಡಿ ಜತ್ತಿ, ಭಾಷಣ ಮಾಡುತ್ತಾ, ನೆಹರುರವರ ಹೊಸ ಪ್ರಯೋಗದಲ್ಲಿ ನಂಬಿಕೆ ಇಟ್ಟರೆ ನಾವು ಯಶಸ್ವಿ ಆಗಬಹುದು ಎಂದರು

ಸಿಕ್ಕನ ಕೊಲೆ

ನವ ದೆಹಲಿ 31 — ಚಾಂದ್ನಿ ಚೌಕದಲ್ಲಿರುವ ಗುರುದ್ವಾರ ಸಿಖಗಂಜಿನಲ್ಲಿ ಒರ್ವ ಬಲವಾದ ಸಿಕ್ ಹಿಂಸಿಸಿ ಕೊಲ್ಲಲ್ಪಟ್ಟನು. ದೆಹಲಿಯಲ್ಲಿರುವ ಗುರುದ್ವಾರವನ್ನು ಹತೋಟಿಗೆ ತೆಗೆದುಕೊಳ್ಳುವದಲ್ಲಿ ತಾತ್ಕಾಸಿಂಗ್ ಬೆಂಬಲಿಗರಿಗೂ ಜ್ಞಾನಿ ಕರ್ತಾರಸಿಂಗ್ ಕಡೆಯವರಿಗೂ ಆದ ಘರ್ಷಣೆಯಲ್ಲಿ ಈ ಘಟನೆ ನಡೆಯಿತೆಂದು ವರದಿ

ವಿಚಾರಣೆ ಆಗಲಿ

ಬೊಂಬಾಯಿ ಮಾ 30 — ರೂ 29 ಸಾವಿರ ಮೊತ್ತದ ಗೋಧಿ ಸಂಬಂಧ ಜಟ ಮಾಡುವಂತೆ ಮಧ್ಯ ಪ್ರದೇಶದಲ್ಲಿ ಇಲ್ಲವಿದ್ದ ಸಂಸ್ಥೆಯೊಂದಕ್ಕೆ ಕಂಟ್ರಾಕ್ಟ್ ದ್ದು 53 ನೇ ಇಸವಿಯಲ್ಲಿ ಕೊಟ್ಟ ಬಗ್ಗೆ ವಿಚಾರಣೆ ನಡೆಯುಬೇಕೆಂದು ಶಾಸನಸಭಾ ಸಾರ್ವಜನಿಕ ಲೆಕ್ಕಾಚಾರ ಸಮಿತಿ ಸೂಚಿಸಿದೆ.

× ಭೂಪಾಲಿನಲ್ಲಿ ಕೋಮು ಗಲಭೆಯಲ್ಲಿ ಇಂದಿನ ಇಬ್ಬರು ಸತ್ತರು

ವಿವಿಧ ವರ್ತಮಾನ

ಜೂನ್ 30— ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ 4 ಮಂದಿ ಹಿಂದೂಮಹಾಸಭಾ ಕಾರ್ಯಕರ್ತರು ಬಂಧಿಸಲ್ಪಟ್ಟಿದ್ದಾರೆ.

ಮೈಸೂರು ಏ 1— ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಯನಸಂಸ್ಥೆ ಕಮಿಟಿ ಏಪ್ರಿಲ್ 6ನೆ ತಾ|| 12 ರಂದು ನಡೆಯುವುದು.

ನವದೆಹಲಿ ಮಾ 31— ತಿಂಗಳಿಗೆ 500 ರೂಗಳಿಗೆ ಹೆಚ್ಚಿಲ್ಲದ ಮೂಲ ವೇತನವಿರುವ ಉಸ್ತುವಾರಿ ಸಿಬ್ಬಂದಿ, ಕಾರಕೂನ ವರ್ಗ ಮತ್ತು ಇನ್ನಿತರ ಕೆಳದರ್ಜೆ ನೌಕರರಿಗೆ ಒಂದು ತಿಂಗಳು ಮೂಲವೇತನವನ್ನು 1957 ನೇ ವರ್ಷದ ಬೋನಸ್ಸು ರೂಪದಲ್ಲಿ ಕೊಡಲು ಜೀವವಿಮಾ ಕಾರ್ಪೊರೇಷನ್ ನಿರ್ಧರಿಸಿದೆ.

ನವದೆಹಲಿ 1 — ಭಾರತದ ವಿಮಾನ ಓಲಿದ ಸ್ಥಾಗನೆಯಾಗಿ ಇಂದಿಗೆ 76 ವರ್ಷಗಳಾದವು ; ಈ ಸಂದರ್ಭದಲ್ಲಿ ಭಾರತದ ರಾಷ್ಟ್ರಾಧ್ಯಕ್ಷರು ಪ್ರಧಾನ ಮಂತ್ರಿಗಳು ರಕ್ಷಣಾ ಮಂತ್ರಿಗಳು ಮತ್ತು ವಿಮಾನಬಲದ ಮುಖ್ಯಾಧಿಕಾರಿಗಳು ಸಂದೇಶವನ್ನು ತಿರುವರು.

ನವದೆಹಲಿ 31— ಮೆಂಪಣಿಗೆಯಲ್ಲಿ ನೆಟಲ್ಕೆಂಟು ಕಮಿಷನರ ಆಫೀಸಿಗೆ ನುಗ್ಗಲು ಬಂದ ನಿರಾಶ್ರಿತರ ಮೇಲೆ ಅಶ್ರುವಾಯು ಪ್ರಯೋಗಿಸಿ ಲಾಠಿ ಚಾರ್ಜು ಮಾಡಿ ಚದುರಿಸಿದರು.

ಬೆಂಗಳೂರು 1— 2 ಕೋಟಿ ರೂಗಳ ಬಂಡವಾಳದ ಮತ್ತು 8 ಜನ ಡೈರೆಕ್ಟರುಗಳುಳ್ಳ ' ಸ್ಟೇಟ್ ಫೈನಾನ್ಸ್ ಕಾರ್ಪೊರೇಷನ್ ' ನ್ನು ರಾಜ್ಯ ಸರಕಾರವು ಮಂಗಳವಾರ ಸ್ಥಾಪಿಸಿತೆಂದು ಪ್ರಕಟವಾಗಿದೆ.

ನವದೆಹಲಿ 31 — ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಮೈಸೂರು ರಾಜ್ಯ ಸರಕಾರದವರು 8 ಕೈಗಾರಿಕಾ ವಸಾಹತುಗಳನ್ನು ನಿರ್ಮಿಸಲು ಉದ್ದೇಶಪಟ್ಟಿರುವರೆಂದೂ, ಈ 8 ಕೈಗಾರಿಕಾ ವಸಾಹತುಗಳು, ಮೈಸೂರು, ಹರಿಹರ, ಬೆಂಗಳೂರು ಗುಲ್ಬರ್ಗ, ಮಂಗಳೂರು, ಬೆಳಗಾವಿ ಮತ್ತು ಹುಬ್ಬಳ್ಳಿಯಲ್ಲಿರುವುವೆಂದೂ, ಮೈಸೂರು ಸರಕಾರಕ್ಕೆ ಕೈಗಾರಿಕಾ ವಸಾಹತುಗಳ ಸ್ಥಾಪನೆಗಾಗಿ, ದ್ವಿತೀಯ ಅವಧಿಯ ಯೋಜನೆಯ ಅವಧಿಯಲ್ಲಿ 23-60 ಲಕ್ಷ ರೂಗಳನ್ನು ಕೊಡಲಾಗಿದೆಯೆಂದೂ ಲೋಕಸಭೆಯಲ್ಲಿ ತಿಳಿಸಲಾಯಿತು.

ವಾರಣಾಸಿ 31— ಈಚೆಗೆ ಹುಡುಗಿಯರ ವಿಷಯದಲ್ಲಿ ಅಕ್ಕೇಪಣೀಯವಾಗಿ ನಡೆದನೆಂದು 18 ವರ್ಷದ ಹುಡುಗನನ್ನು ಪೋಲೀಸರು ಹೊಡೆದು ಬಂಧಿಸಿದ್ದರು ; ಮಾರನೇ ದಿನ ಜಾಮೀನಿನ ಮೇಲೆ ಬಿಡಲ್ಪಟ್ಟ ಅವನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದನು , ಅಲ್ಲಿ ಕಳೆದ ತಾ|| 27 ರಂದು ಸತ್ತುಹೋದನು — ಪೋಲೀಸರ ಅತೀವ ಹಿಂಸೆಯು ಸಾವಿಗೆ ಕಾರಣವೆಂದು ಊರಿನಲ್ಲಿ ಸುದ್ದಿ ಹರಡಲು ಈ ಬಗ್ಗೆ ಮ್ಯಾಜಿಸ್ಟ್ರೇಟರಿಂದ ತನಿಖೆಗೆ ಜಿಲ್ಲಾ ಮ್ಯಾಜಿಸ್ಟ್ರೇಟರು ಆಜ್ಞೆ ಮಾಡಿದ್ದಾರೆ — ಊರಿನ ಹೆಚ್ಚು ಹಾಲಿನ ಅಂಗಡಿಗಳ ಮಾಲೀಕರಾದ ಯಾದವ ಜನಾಂಗಕ್ಕೆ ಸೇರಿದವನು ಈ ಹುಡುಗ — ಪೋಲೀಸರ ದುರ್ನಡತೆ ಪ್ರತಿಭಟಿಸಿ ಊರಿನ ಎಲ್ಲಾ ಹಾಲಿನ ಅಂಗಡಿಯವರೂ ನಿನ್ನೆ ಹರತಾಳವನ್ನಾಚರಿಸಿದರು.

ವುಡ್‌ಲಾಂಡ್ಸ್ ಯಶಸ್ವಿ 3 ನೇ ವಾರ

ಕಾಲಾಪಾನಿ (ಹಿಂದಿ)

ಅತ್ಯುತ್ತಮ ಪತ್ತೇದಾರಿ ಕಥಾವಸ್ತು — | ದಿನ 3 ಪ್ರದರ್ಶನಗಳು

ತಾರಾಗಣ— ದೇವ್‌ಆನಂದ್, ಮಧುಬಾಲ, ನಳಿನಿಜಯವಂತ್, ಕಿಶೋರ್‌ಸಾಹು

.... 3—4—59 ರಿಂದ ....

ಅನಾಡಿ [ಹಿಂದಿ] Anari

ತಾರಾಗಣ— ನೂತನ್, ರಾಜ್ ಕಪೂರ್

ಅಪೆರಾ—

3—4—59 ರಿಂದ

ಅಮೋಘ ಆರಂಭ

ಸಕಲರೂ ನೋಡಬೇಕಾದ

ಮನೋಜ್ಞ ಪೌರಾಣಿಕ ಚಿತ್ರ

ಸತೀತುಲಸಿ ತೆಲುಗು

ಪಾತ್ರ— ಎಸ್ ವರಲಕ್ಷ್ಮಿ, ಕೃಷ್ಣ ಕುಮಾರಿ, ಅವಂನಾಥ್, ಗುಪ್ತಾಡಿ

ಪ್ರತಿದಿನ 3 ಆಟಗಳು

SHAKTI SUDHA

A Superb Tonic

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಅ ಶೋ ಕಾ ಫಾರ್ಮಸಿ

ಅಶೋಕ್ಸ್‌ಡೋಕ್ ಬಜಾರ್ ಮೈಸೂರು

For Quality Printing

L. N. Press

Sivarampet, Mysore

ಗೋರಕ್ಷಣಾ, ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಪೋಷಕರು ರೂ 25, ಬೆಂಬಲಿಗರು ರೂ 10 (ಒಂದೇ ಸಾರಿ)

Advertise in Goraksana and help the pious cause

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

Edited, Printed & Published by Dharma Prachara Nurse M. S. Krishna Rao, at the Satyavadi Press Chamarajapuram, Mysore